






ದಿನಾಂಕ: 11-05-26 ರಿಂದ 18-05-2026 ರವರೆಗೆ ಫಿಲಿಪೈನ್ಸ್ ದೇಶದ ಮನಿಲಾದಲ್ಲಿ "ವಿಶ್ವವಾಣಿ ಪತ್ರಿಕೆ ವತಿಯಿಂದ" ನಡೆದ ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ನಾನಾ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸುವುದರ ಜೊತೆಗೆ ಗುಚ್ಛದಂತಿರುವ ಸಪ್ತಸಾವಿರ ಫಿಲಿಫೈನ್ಸ್‌ನ ಐತಿಹಾಸಿಕ, ಪಾರಂಪರಿಕ ಸ್ಥಳಗಳಿಗೆ ಭೇಟಿ ನೀಡಿದರು. ರಾಜ್ಯೋತ್ಸವ ಪ್ರಶಸ್ತಿ ರಾಷ್ಟ್ರಪತಿ ಪ್ರಶಸ್ತಿ ಎಲ್ಲವೂ ದೊಡ್ಡ ಗೌರವಗಳು. ಆದರೆ ಯಾವುದೇ ಶಿಫಾರಸ್ಸು, ಪ್ರಭಾವ ಅಥವಾ ಲಾಭಿ ಇಲ್ಲದೆ ನಿಜವಾದ ಸಾಧಕರನ್ನು ಹುಡುಕಿ ಗೌರವಿಸುವ ಈ ಪ್ರಶಸ್ತಿ ಅವಕ್ಕಿಂತ ಮಿಗಿಲಾದದ್ದು. ಇದು ನಿಜವಾದ ಸಾಧಕರಿಗೆ ಮಾತ್ರ ಸಿಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.